# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ವಿವಿಧ ವಿಕಲಚೇತನ ಫಲಾನುಭವಿಗಳಿಗೆ "ಆಧಾರ ಯೋಜನೆಯಡಿ" ನೀಡಲಾದ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ:ಇಸಿ/ಸಿ-1/ಆಧಾರ/ಸಾಲ/ಮನ್ನಾ/14/2015-16/1021, ದಿ:25.06.2015
2. ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ:ಇಸಿ/ಸಿ-1/ಆಧಾರ/ಸಾಲ/ಮನ್ನಾ/14/2015-16/3816, ದಿ:12.02.2016
3. ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ:ಇಸಿ/ಸಿ-1/ಆಧಾರ/ಸಾಲ/ಮನ್ನಾ/14/2015-16/3957, ದಿ:23.02.2016

ಪ್ರಸ್ತಾವನೆ:

ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ 2015-16ನೇ ಸಾಲಿನ ಆಯವ್ಯಯ ಭಾಷಣ ಕ್ರಮ ಸಂಖ್ಯೆ:182ರಲ್ಲಿ ವಿಕಲಚೇತನರ ಸ್ವಯಂ ಉದ್ಯೋಗಕ್ಕಾಗಿ ಆಧಾರ ಯೋಜನೆ ಅಂದಾಜು 5200 ವಿಕಲಚೇತನರಿಗೆ ದಿ:31.03.2014ರವರೆಗೆ ನೀಡಲಾದ ಅಸಲು ಮತ್ತು ಮರುಪಾವತಿಯಾಗದಿರುವ ಬಡ್ಡಿ ಮನ್ನಾ ಮಾಡಲಾಗುವುದೆಂದು ಘೋಷಿಸಿರುತ್ತಾರೆ.

ಮಾನ್ಯ ಮುಖ್ಯಮಂತ್ರಿಯವರು 2015-16ನೇ ಸಾಲಿನ ಆಯವ್ಯಯ ಭಾಷಣಕ್ಕೆ ಮಾಹಿತಿಯನ್ನು ನೀಡುವ ಸಮಯದಲ್ಲಿ ಕಛೇರಿಯಲ್ಲಿ ಲಭ್ಯವಿದ್ದ ಅಂದಾಜು ಮಾಹಿತಿಯನ್ನು ನೀಡಲಾಗಿದ್ದು, ತದನಂತರ ಜಿಲ್ಲಾ ಕಛೇರಿಗಳಿಂದ ತರಿಸಿದ ಮಾಹಿತಿಯನ್ನಾಧರಿಸಿ, ದಿ:31.03.2014ರ ಅಂತ್ಯದವರೆಗೆ ಒಟ್ಟು 10,069 ವಿಕಲಚೇತನ ಫಲಾನುಭವಿಗಳು ಸೌಲಭ್ಯ ಪಡೆದಿರುವುದು ಅಂಕಿ ಅಂಶಗಳಿಂದ ತಿಳಿದು ಬಂದಿದ್ದು, ಕೇವಲ 5,200 ಫಲಾನುಭವಿಗಳ ಸಾಲವನ್ನು ಮಾತ್ರ ಮನ್ನಾ ಮಾಡಿದಲ್ಲಿ ಉಳಿದ ಫಲಾನುಭವಿಗಳು ಸಹ ತಮ್ಮ ಸಾಲವನ್ನು ಮನ್ನಾ ಮಾಡುವಂತೆ ಕೋರುವ ಸಾಧ್ಯತೆಗಳು ಇರುವುದರಿಂದ ಮಾಹಿತಿಯನುಸಾರ 10,069 ವಿಕಲಚೇತನ ಫಲಾನುಭವಿಗಳಿಗೆ ಸಾಲವನ್ನು ಮನ್ನಾ ಮಾಡುವಂತೆ ಮೇಲೆ ಓದಲಾದ ಕ್ರ.ಸಂ. (2)ರ ಪತ್ರದಲ್ಲಿ ಕೋರಿರುತ್ತಾರೆ.

ಆಧಾರ ಯೋಜನೆಯಡಿಯಲ್ಲಿ ವಿಕಲಚೇತನರ ಆರ್ಥಿಕ ಪುನರ್ವಸತಿ ಮತ್ತು ಸ್ವ ಉದ್ಯೋಗ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ರೂ. 15,000/- ಬೆಲೆಯ ಪೆಟ್ಟಿಗೆ ಹಾಗೂ ರೂ. 20,000 ಮೂಲ ಬಂಡವಾಳವನ್ನು ಬಡ್ಡಿರಹಿತ ಸಾಲದ ರೂಪದಲ್ಲಿ ನೀಡಲಾಗುತ್ತಿದ್ದು, ಬಹುತೇಕ ವಿಕಲಚೇತನರು ಬಡತನ ರೇಖೆಗಿಂತ ಕೆಳಗಿದ್ದು, ಆರ್ಥಿಕ ಸ್ವಾವಲಂಬನೆಗೆ ಯೋಜನೆ ಸಹಕಾರಿಯಾಗುತ್ತದೆ ಮತ್ತು ಸರ್ಕಾರ ಘೋಷಿಸಿರುವಂತೆ ಸಾಲ ಪಡೆದಿರುವ ಎಲ್ಲಾ 10,069 ಫಲಾನುಭವಿಗಳ ರೂ. 11,07,80,443/-ಗಳನ್ನು ಒಮ್ಮೆಲೆ ಮನ್ನಾ ಮಾಡಿದಲ್ಲಿ ವಿಕಲಚೇತನರ ಅಭಿವೃದ್ಧಿಗೆ ಪೂರಕವಾಗಿ ಸಹಾಯವಾಗುತ್ತದೆಂದು ತಿಳಿಸಿ ಈ ಕೆಳಕಂಡಂತೆ ವಿಕಲಚೇತನರು ಪಡೆಯಲಾದ ಸಾಲದ ವಿವರವನ್ನು ಒದಗಿಸಿರುತ್ತಾರೆ.

1995-96ರಿಂದ 31.03.2014ರವರೆಗೆ ಒದಗಿಸಿರುವ ಸಾಲ ಹಾಗೂ ಬಡ್ಡಿಯ ವಿವರ

| ಕ್ರ ಸಂ. | ವರ್ಷ | ಸಾಲ ಪಡೆದ ಫಲಾನುಭವಿಗಳ ಸಂಖ್ಯೆ | ಪ್ರತಿ ಫಲಾನುಭವಿಗೆ ನೀಡಿರುವ ಸಾಲದ ಮೊತ್ತ | ಬಿಡುಗಡೆಯಾದ ಸಾಲದ ಮೊತ್ತ | ಮರು ಪಾವತಿಯಾದ ಸಾಲದ ಮೊತ್ತ | ಬಾಕಿ ಇರುವ ಸಾಲದ ಮೊತ್ತ |
|---|---|---|---|---|---|---|
| 1 | 1995-96 | 646 | 5,000 | 32,30,000 | 3,93,650 | 28,36,350 |
| 2 | 1996-97 | 783 | 5,000 | 39,15,000 | 3,87,150 | 35,27,850 |
| 3 | 1997-98 | 579 | 5,000 | 28,95,000 | 2,96,725 | 25,98,275 |
| 4 | 1998-99 | 453 | 6,000 | 27,18,000 | 2,46,050 | 24,71,950 |
| 5 | 1999-2000 | 643 | 6,000 | 38,58,000 | 2,81,250 | 35,76,750 |
| 6 | 2000-01 | 639 | 6,000 | 38,34,000 | 2,10,875 | 36,23,125 |
| 7 | 2001-02 | 733 | 6,000 | 43,98,000 | 2,51,250 | 41,46,750 |
| 8 | 2002-03 | 593 | 6,000 | 35,58,000 | 2,22,450 | 33,35,550 |
| 9 | 2003-04 | 394 | 6,000 | 23,64,000 | 2,08,800 | 21,55,200 |
| 10 | 2004-05 | 237 | 6,000 | 14,22,000 | 1,25,630 | 12,96,370 |
| 11 | 2005-06 | 306 | 6,000 | 18,36,000 | 94,100 | 17,41,900 |
| 12 | 2006-07 | 1,942 | 20,000 | 3,88,40,000 | 10,08,227 | 3,78,31,773 |
| 13 | 2007-08 | 544 | 20,000 | 1,08,80,000 | 2,91,300 | 1,05,88,700 |
| 14 | 2008-09 | 371 | 20,000 | 74,20,000 | 1,11,650 | 73,08,350 |
| 15 | 2009-10 | 0 | 20,000 | 0 | 0 | 0 |
| 16 | 2010-11 | 358 | 20,000 | 71,60,000 | 1,14,250 | 70,45,750 |
| 17 | 2011-12 | 285 | 20,000 | 57,00,000 | 1,26,000 | 55,74,000 |
| 18 | 2012-13 | 270 | 20,000 | 54,00,000 | 1,13,200 | 52,86,800 |
| 19 | 2013-14 | 293 | 20,000 | 58,60,000 | 25,000 | 58,35,000 |
| | ಒಟ್ಟು | 10,069 | | 11,52,88,000 | 45,07,557 | 11,07,80,443 |

ಮೇಲ್ಕಾಣಿಸಿದಂತೆ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ವಿವಿಧ ವಿಕಲಚೇತನ ಫಲಾನುಭವಿಗಳಿಗೆ ಆಧಾರ ಯೋಜನೆಯಡಿ ನೀಡಲಾದ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಲು ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ಮೇಲೆ ಓದಲಾದ ಕ್ರ.ಸಂ. (3)ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಮಮಇ 189 ಪಿಹೆಚ್‌ಪಿ 2015, ಬೆಂಗಳೂರು, ದಿ:04.06.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ದೃಷ್ಟಿದೋಷ, ಶ್ರವಣದೋಷ, ಚಲನವಲನ ನ್ಯೂನ್ಯತೆ ಮತ್ತು ಮನೋವಿಕಲತೆ ಹೊಂದಿರುವ ಅಂಗವಿಕಲರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸಿಕೊಡುವ, ಅಂಗವಿಕಲರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಪ್ರೋತ್ಸಾಹಿಸುವ ಮತ್ತು ಅಂಗವಿಕಲರ ಆರ್ಥಿಕ

ಮಟ್ಟವನ್ನು ಅಭಿವೃದ್ಧಿಗೊಳಿಸಿ ಇವರು ಸಮಾಜದಲ್ಲಿ ಇತರರಿಗೆ ಸಮಾನವಾಗಿ ಬಾಳಲು ಅವಕಾಶ ಮಾಡಿಕೊಡುವ ಉದ್ದೇಶದೊಂದಿಗೆ ಪ್ರಾರಂಭಿಸಲಾದ "ಆಧಾರ" ಯೋಜನೆಯ 1995-96ನೇ ಸಾಲಿನಿಂದ 31.03.2014ರ ಅಂತ್ಯದವರೆಗೆ ಒಟ್ಟು 10,069 ಅಂಗವಿಕಲ ಫಲಾನುಭವಿಗಳಿಗೆ ನೀಡಲಾದ ಒಟ್ಟು ರೂ. 11,52,88,000/- ಸಾಲದಲ್ಲಿ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಮರುಪಾವತಿಯಾಗದೇ ಉಳಿದಿರುವ ಸಾಲ ಮತ್ತು ಬಡ್ಡಿ ರೂ.11,07,80,443/- ಗಳನ್ನು (ಹನ್ನೊಂದು ಕೋಟಿ ಏಳು ಲಕ್ಷದ ಎಂಬತ್ತು ಸಾವಿರದ ನಾಲ್ಕುನೂರಾನಲವತ್ಮೂರು ರೂಪಾಯಿಗಳು ಮಾತ್ರ) ಮನ್ನಾ ಮಾಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 53 ವೆಚ್ಚ-3/2016, ದಿ:14.03.2016ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಲಕ್ಷ್ಮಿ) 4/6/2016
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ಮುಖ್ಯ ಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು.
5. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು (ಸಚಿವ ಸಂಪುಟ ಶಾಖೆ), ವಿಧಾನಸೌಧ ಬೆಂಗಳೂರು (ಪ್ರಕರಣ ಸಂಖ್ಯೆ:ಸಿ.246/2016)
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(3 & 9), ವಿಧಾನ ಸೌಧ, ಬೆಂಗಳೂರು
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಶಾಖಾಧಿಕಾರಿ, ಸ್ವೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಎ.ಡಿ.ಪಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

| ಸರ್ಕಾರಿ ಆದೇಶ ಸಂಖ್ಯೆ:ಮಮಇ 189 ಪಿಹೆಚ್‌ಪಿ 2015, ಬೆಂಗಳೂರು, ದಿ: 04.06.2016ಕ್ಕೆ ಅನುಬಂಧ | | | | | | |
|---|---|---|---|---|---|---|
| ಕ್ರ. ಸಂ. | ವರ್ಷ | ಸಾಲಪಡೆದ ಫಲಾನುಭವಿಗಳ ಸಂಖ್ಯೆ | ಪ್ರತಿ ಫಲಾನುಭವಿಗೆ ನೀಡಿರುವ ಸಾಲದ ಮೊತ್ತ | ಬಿಡುಗಡೆಯಾದ ಸಾಲದ ಮೊತ್ತ | ಮರು ಪಾವತಿಯಾದ ಸಾಲದ ಮೊತ್ತ | ಬಾಕಿ ಇರುವ ಸಾಲದ ಮೊತ್ತ |
| 1 | 1995–96 | 646 | 5,000 | 32,30,000 | 3,93,650 | 28,36,350 |
| 2 | 1996–97 | 783 | 5,000 | 39,15,000 | 3,87,150 | 35,27,850 |
| 3 | 1997–98 | 579 | 5,000 | 28,95,000 | 2,96,725 | 25,98,275 |
| 4 | 1998–99 | 453 | 6,000 | 27,18,000 | 2,46,050 | 24,71,950 |
| 5 | 1999–2000 | 643 | 6,000 | 38,58,000 | 2,81,250 | 35,76,750 |
| 6 | 2000–01 | 639 | 6,000 | 38,34,000 | 2,10,875 | 36,23,125 |
| 7 | 2001–02 | 733 | 6,000 | 43,98,000 | 2,51,250 | 41,46,750 |
| 8 | 2002–03 | 593 | 6,000 | 35,58,000 | 2,22,450 | 33,35,550 |
| 9 | 2003–04 | 394 | 6,000 | 23,64,000 | 2,08,800 | 21,55,200 |
| 10 | 2004–05 | 237 | 6,000 | 14,22,000 | 1,25,630 | 12,96,370 |
| 11 | 2005–06 | 306 | 6,000 | 18,36,000 | 94,100 | 17,41,900 |
| 12 | 2006–07 | 1,942 | 20,000 | 3,88,40,000 | 10,08,227 | 3,78,31,773 |
| 13 | 2007–08 | 544 | 20,000 | 1,08,80,000 | 2,91,300 | 1,05,88,700 |
| 14 | 2008–09 | 371 | 20,000 | 74,20,000 | 1,11,650 | 73,08,350 |
| 15 | 2009–10 | 0 | 20,000 | 0 | 0 | 0 |
| 16 | 2010–11 | 358 | 20,000 | 71,60,000 | 1,14,250 | 70,45,750 |
| 17 | 2011–12 | 285 | 20,000 | 57,00,000 | 1,26,000 | 55,74,000 |
| 18 | 2012–13 | 270 | 20,000 | 54,00,000 | 1,13,200 | 52,86,800 |
| 19 | 2013–14 | 293 | 20,000 | 58,60,000 | 25,000 | 58,35,000 |
| ಒಟ್ಟು | | 10,069 | | 11,52,88,000 | 45,07,557 | 11,07,80,443 |

4/6/2016

(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ